ಶ್ರೀ ಪಿ. ಎನ್. ಪಾಟೀಲ್.—ತಾವು ಹೀಗೆಲ್ಲಾ ಮಾಡುವುದಾದರೆ ನಮ್ಮ ವಿಷಾದವನ್ನು ವ್ಯಕ್ತಪಡಿಸಲು ವಾಕ್‌ಔಟ್ ಮಾಡಬೇಕಾಗುತ್ತದೆ.....

ಶ್ರೀ ಎಂ. ಎಸ್. ಕೃಷ್ಣನ್, ಶ್ರೀ ಕಕ್ಕಿಲಾಯ, ಶ್ರೀ ಪಿ. ಎನ್. ಪಾಟೀಲ್ ಇವರೆಲ್ಲಾ (ಸಭೆಯಿಂದ ಹೊರಗಡೆಗೆ ಹೋದರು).

[*The members withdrew*]

(i) Mysore Ownership Flats (Regulation of the promotion of Construction, Sale, Management and Transfer) Bill, 1972.

(ii) The Mysore Apartment Ownership Bill, 1972.

(iii) The Mysore Acquisition of Lands (For Grant of House Sites) Bill, 1972—Introduction.

Sri B. BASAVALINGAPPA (Minister for Municipal Administration).—I beg to introduce the following Bills :

(*a*) The Mysore Ownership Flats (Regulation of the Promotion* of Construction, Sale, Management and Transfer) Bill, 1972 ;

(*b*) The Mysore Apartment Ownership Bill, 1972 ;*

(*c*) The Mysore Acquisition of Lands (For Grant of House Sites) Bill, 1972.*

Madam SPEAKER.—The Bills are introduced.

Statement of the Chief Minister

re:—Constitution of One Man Commission

ಶ್ರೀ ಸಿ. ಬೈರೇಗೌಡ. ಸರ್ಕಾರದವರು ಆ ಸಮಿತಿಯನ್ನು ನಿರ್ಮಾಣ ಮಾಡುವುದಕ್ಕೆ ಕಾರಣ ಏನ್.....

ಅಧ್ಯಕ್ಷರು.—ನೀವೂ ಕೂಡ ಈಗ ವಾಕ್‌ಔಟ್ ಮಾಡಬೇಕೆಂದು ನಿಂತಿದ್ದೀರಾ ?

ಶ್ರೀ ಸಿ. ಬೈರೇಗೌಡ.—ಈ ವಿಚಾರದಲ್ಲಿ ನನ್ನ ತೀವ್ರ ವಿರೋಧವಿದೆ.
(ಸಭೆಯಿಂದ ಮಾನ್ಯ ಸದಸ್ಯರಾದ ಬೈರೇಗೌಡರೂ ಹೊರಗಡೆಗೆ ಹೋದರು)

ಶ್ರೀ ಡಿ ದೇವರಾಜ ಅರಸ್.—ಈಗತಾನೆ ಸದನದಲ್ಲಿ ಇದ್ದ ಮಾನ್ಯ ಸದಸ್ಯರುಗಳು ಏನು ವಾಕೌಟನ್ನು ಮಾಡಿದರು ಅದು ಸಭಾಘನತೆಗೆ ಯಾವ ರೀತಿಯಿಂದಲೂ ಸರಿಯಾದುದಲ್ಲ. ಅವರು ಸಭೆಗೆ ಅಗೌರವ ತರತಕ್ಕ ರೀತಿಯಲ್ಲಿ ನಡೆದುಕೊಂಡಿದ್ದಾರೆಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಮಾನ್ಯ ವಿರೋಧಪಕ್ಷದ ನಾಯಕರೂ ಮತ್ತು ಇತರರೂ ರಾಜ್ಯದಲ್ಲಿ ಅಭಾವ ಪರಿಸ್ಥಿತಿ ಎನು ಉಂಟಾಗಿದೆ ಅದರ ಪರಿಶೀಲನೆಗಾಗಿ ಒಂದು ಸಮಿತಿಯನ್ನು ನೇಮಿಸಬೇಕು ಎಂದು ಹೇಳಿದನಂತರ ಸರ್ಕಾರದವರೂ ಕೂಡ ವಿಷಯವನ್ನು ಪರಿಶೀಲನೆ ಮಾಡಿ ಅದರ ಬಗ್ಗೆ ಒಂದು ಸಮಿತಿಯನ್ನು ನೇಮಕ ಮಾಡುವುದರ ಬಗ್ಗೆ ಸರ್ಕಾರದ ಅಭ್ಯಂತರವೇನೂ ಇರುವುದಿಲ್ಲ ಎಂದು ಹೇಳಿದ ನಂತರ ಅದರ ಬಗ್ಗೆ ಮೊದಲು ಒಂದು ಸಮಿತಿಯನ್ನು ಮಾಡಿದ್ದಾಯಿತು. ಮತ್ತೆ ಅದನ್ನು ಸರಿಯಾಗಿಲ್ಲ ಎಂದು ಹೇಳಿದ್ದರಿಂದ ಇನ್ನೊಂದು ಸಮಿತಿಯನ್ನು ನೇಮಕ ಮಾಡಿದ್ದಾಯಿತು. ಅದೂ ಸರಿಯಾಗಿಲ್ಲವೆಂದು ಹೇಳಿದ್ದಕ್ಕೆ ಸಭೆಯಲ್ಲೇ ನನ್ನೆಯ ದಿವಸ ಒಂದು ತೀರ್ಮಾನ

*The Three Bills introduced are reproduced as Annexure to the day's proceedings.